# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 543(630)

ಸದಸ್ಯರ ಹೆಸರು ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ 09.03.2026

ಉತ್ತರಿಸುವವರು ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಅರಂತೋಡು ಗ್ರಾಮದ ಅಡ್ತಲೆ ಭಾಗ ಸೇರಿದಂತೆ ಜಿಲ್ಲೆಯ ಹಲವಾರು ಭಾಗಗಳಲ್ಲಿ ಕಾಡಾನೆಗಳ ಹಾವಳಿ ವಿಪರೀತವಾಗಿದ್ದು, ಸತತವಾಗಿ ಅಪಾರ ಪ್ರಮಾಣದಲ್ಲಿ ಬೆಳೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದಲ್ಲ ಒಂದು ಕಡೆ ಕಾಡಾನೆಗಳು ಪ್ರತಿದಿನ ದೊಡ್ಡಮಟ್ಟದಲ್ಲಿ ನಿರಂತರವಾಗಿ ಹಾನಿ ಮಾಡುತ್ತಿದ್ದು, ಇದರಿಂದಾಗಿ ಕೃಷಿಕರು ಅತ್ಯಂತ ಸಂಕಷ್ಟಕ್ಕೆ ಸಿಲುಕಿದ್ದರೂ ಸಹ ಈ ತೊಂದರೆಯನ್ನು ತಪ್ಪಿಸಲು ಸರ್ಕಾರ ಇದುವರೆಗೆ ಯಾವುದೇ ಸೂಕ್ತ ಹಾಗೂ ಶಾಶ್ವತ ಪರಿಹಾರದ ಕ್ರಮಗಳನ್ನು ಕೈಗೊಳ್ಳದಿರಲು ಕಾರಣಗಳೇನು: | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಡಾನೆಯ ಹಾವಳಿಯನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರತ್ತದೆ.<br>• ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ 240.455 ಕಿ.ಮೀ. ಆನೆ ನಿರೋಧಕ ಕಂದಕ, 27.100 ಕಿ.ಮೀ., ಸೋಲಾರ್ ತೂಗುತಂತಿ ಬೇಲಿ, 3.824 ಕಿ.ಮೀ ವಿಶೇಷ ವಿನ್ಯಾಸ ತಡೆಗೋಡೆ ಮತ್ತು ಬೇಲಿ, 15.557 ಕಿ.ಮೀ ಸಹಾಯಕ ಧನದ ಸೋಲಾರ್ ತಂತಿ ಬೇಲಿ ನಿರ್ಮಿಸಲಾಗಿದೆ.<br>• ಕಾಡಾನೆ ಹಾವಳಿ ಹೆಚ್ಚಾಗಿರುವ ಪ್ರದೇಶದಲ್ಲಿ ಜನ ಸಂಪರ್ಕ ಸಭೆಯನ್ನು ಕರೆದು ಜನರಲ್ಲಿ ಅರಿವು ಮೂಡಿಸಿ, ವನ್ಯಪ್ರಾಣಿಗಳ ಬಗ್ಗೆ ಜಾಗೃತಿ ಹಾಗೂ ಸಹಬಾಳ್ವೆ ಮೂಡಿಸುವ ಸಭೆ / ಕಾರ್ಯಾಗಾರ ಏರ್ಪಡಿಸಲಾಗುತ್ತಿದೆ.<br>• ಬೆಳೆ ಹಾನಿ ಪ್ರಕರಣಗಳಲ್ಲಿ ಕೂಡಲೇ ಸರಕಾರದ ಆದೇಶದ ಪ್ರಕಾರ ದಯಾತ್ಮಕ ಧನವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಪಾವತಿಸಲಾಗುತ್ತಿದೆ.<br>• ರೈತರಿಗೆ ಸಬ್ಸಿಡಿ ದರದಲ್ಲಿ ಸೋಲಾರ್ ಬೇಲಿ ನಿರ್ಮಾಣ ಮಾಡಲು ಉತ್ತೇಜನ ನೀಡಲಾಗುತ್ತಿದೆ ಹಾಗೂ ಅರಣ್ಯದ ಅಂಚಿನಲ್ಲಿ ಬರುವ ಖಾಸಗಿ ಜಮೀನುಗಳ ಸುತ್ತಾ ಸರ್ಕಾರದ ವತಿಯಿಂದ ದೊರಕುವ ಶೇ. 50 ಸಬ್ಸಿಡಿಯನ್ನು ಬಳಸಿಕೊಂಡು ಸೌರಶಕ್ತಿ ಬೇಲಿಯನ್ನು ನಿರ್ಮಿಸಲಾಗುತ್ತಿದೆ.<br>• ಅರಣ್ಯ ರಕ್ಷಣೆ ಕ್ಯಾಂಪಿನ ಸಿಬ್ಬಂದಿಗಳನ್ನು ಆನೆ ಹಾವಳಿ ಸಮಯದಲ್ಲಿ ನಿಯಂತ್ರಣ ಕಾರ್ಯಗಳಿಗೆ ತೊಡಗಿಸಿಕೊಳ್ಳಲಾಗುತ್ತಿದೆ.<br>• ಬೇರೆ ವಿಭಾಗಗಳಲ್ಲಿನ ಎಲಿಫೆಂಟ್ ಟ್ರಾಕರ್ಸ್‌ಗಳು, ನುರಿತ ಆನೆ ಕಾವಾಡಿಗರು ಹಾಗೂ ವೈದ್ಯರ ಸಹಯೋಗವನ್ನು ಪಡೆದು ಊರಿಗೆ ಬಂದ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸಿರುವ ಹಾಗೂ ಸೆರೆಹಿಡಿಯುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ಕಾಡಾನೆ ಸಂಚರಿಸುವ ಸ್ಥಳಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸಲಾಗುತ್ತಿದೆ. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>

- ರಾತ್ರಿ ಗಸ್ತು ತಂಡವನ್ನು ರಚಿಸಿಕೊಂಡು ನಿರಂತರವಾಗಿ ಗಸ್ತು ಸಂಚರಿಸಿ ಕಾಡಾನೆ ಹಾವಳಿಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಕಾಡಾನೆ ಹಾವಳಿ ಇರುವ ಗ್ರಾಮಗಳಲ್ಲಿ ಸ್ಥಳೀಯ ಗ್ರಾಮಸ್ಥರು, ಇಲಾಖಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮೊಬೈಲ್ ಸಂದೇಶ-ಗ್ರೂಪ್‌ಅನ್ನು ರಚಿಸಿ, ಕಾಡಾನೆ ಹಾವಳಿ ಬಗ್ಗೆ ಸಂದೇಶಗಳನ್ನು ಸ್ಥಳೀಯರಿಗೆ ರವಾನಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಭಾಗೀಯ ಕಮಾಂಡ್ ಕೇಂದ್ರವನ್ನು ತೆರೆದಿದ್ದು, ಸದರಿ ಕೇಂದ್ರದಲ್ಲಿ ಆನೆಯ ಚಲನ ವಲನವನ್ನು ಪರಿಶೀಲಿಸಲಾಗುತ್ತಿದ್ದು, ಸದರಿ ಕೇಂದ್ರಕ್ಕೆ ಸಾರ್ವಜನಿಕರು ಆನೆ ಇರುವಿಕೆ ಬಗ್ಗೆ ದೂರನ್ನು ನೀಡಬಹುದಾಗಿದ್ದು, ಸದರಿ ದೂರನ್ನು ಮುಕ್ತಾಯಗೊಳಿಸುವವರೆಗೆ ಸದರಿ ಕೇಂದ್ರದಲ್ಲಿ ಪರಿಶೀಲಿಸಲಾಗುತ್ತಿದೆ.

</td></tr>
<tr><td>ಇ)</td><td>ಜಿಲ್ಲೆಯಲ್ಲಿ 2024-25 ಮತ್ತು 2025-26ನೇ ಸಾಲಿನಲ್ಲಿ ಕಾಡಾನೆ ದಾಳಿಯಿಂದಾಗಿ ಬೆಳೆ ಹಾನಿಯಾಗಿರುವ ಎಷ್ಟು ಪ್ರಕರಣಗಳು ಇದುವರೆಗೆ ವರದಿಯಾಗಿವೆ;<br>ಸಂಭವಿಸಿರುವ ನಷ್ಟದ ವಿವರಗಳೇನು; ಹಾಗೂ ಸದರಿ ಪ್ರಕರಣಗಳಲ್ಲಿ ಸರ್ಕಾರ ತೆಗೆದುಕೊಂಡಿರುವ ಪರಿಹಾರದ ಕ್ರಮಗಳೇನು; ಹಾಗೂ ಇದುವರೆಗೆ ವಿತರಿಸಿರುವ ಪರಿಹಾರದ ಮೊತ್ತವೆಷ್ಟು;<br>(ತಾಲೂಕುವಾರು ಮತ್ತು ಪ್ರಕರಣವಾರು ಸಂಪೂರ್ಣ ವಿವರ ನೀಡುವುದು)</td><td>

ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುತ್ತಿರುವ ನಷ್ಟಗಳಿಗೆ ಈ ಕೆಳಗಿನ ಸರ್ಕಾರಿ ಆದೇಶಗಳನ್ವಯ ದಯಾತ್ಮಕ ಧನವನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

1. ಸರ್ಕಾರದ ಆದೇಶ ಸಂಖ್ಯೆ: ಅಪಜೀ. 156. ಎಫ್‌ಡಬ್ಲ್ಯೂಎಲ್. 2022 ಬೆಂಗಳೂರು ದಿನಾಂಕ: 18-01-2023 **(ಬೆಳೆ ಹಾನಿ ಪ್ರಕರಣ)**
2. ಸರ್ಕಾರದ ಆದೇಶ ಸಂಖ್ಯೆ: ಅಪಜೀ. 114. ಎಫ್‌ಡಬ್ಲ್ಯೂಎಲ್. 2022 ಬೆಂಗಳೂರು ದಿನಾಂಕ: 15-12-2022 **(ಮಾನವ ಗಾಯ)**
3. ಸರಕಾರಿ ಆದೇಶ ಸಂಖ್ಯೆ ಇ-ಸಂಖ್ಯೆ ಅಪಜೀ.114. ಎಫ್‌ಡಬ್ಲ್ಯೂಎಲ್. 2022 ಬೆಂಗಳೂರು ದಿನಾಂಕ: 29-04-2025 **(ಮಾನವ ಸಾವು ಪ್ರಕರಣ)**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2024-25 ಮತ್ತು 2025-26ನೇ ಸಾಲಿನಲ್ಲಿ ಕಾಡಾನೆ ದಾಳಿಯಿಂದಾಗಿ ಬೆಳೆ ಹಾನಿಯಾಗಿರುವ ಪ್ರಕರಣಗಳ ವಿವರ ಮತ್ತು ನೀಡಲಾಗಿರುವ ದಯಾತ್ಮಕ ಧನದ ವಿವರವು ಈ ಕೆಳಗಿನಂತಿದೆ.

<table>
<tr><th>ಕ್ರ. ಸಂ</th><th>ತಾಲ್ಲೂಕು</th><th>ಪ್ರಕರಣಗಳ ಸಂಖ್ಯೆ</th><th>ಪಾವತಿಸಲಾದ ದಯಾತ್ಮಕ ಮೊತ್ತ (ರೂ.ಗಳಲ್ಲಿ)</th></tr>
<tr><td colspan="4">2024-25</td></tr>
<tr><td>1</td><td>ಬೆಳ್ತಂಗಡಿ</td><td>62</td><td>15,73,976.00</td></tr>
<tr><td>2</td><td>ಸುಳ್ಯ</td><td>192</td><td>57,43,337.00</td></tr>
<tr><td>3</td><td>ಕಡಬ</td><td>119</td><td>22,57,774.00</td></tr>
<tr><td>4</td><td>ಪುತ್ತೂರು</td><td>18</td><td>4,12,122.00</td></tr>
<tr><td colspan="4">2025-26</td></tr>
<tr><td>1</td><td>ಬೆಳ್ತಂಗಡಿ</td><td>88</td><td>18,50,835.00</td></tr>
<tr><td>2</td><td>ಸುಳ್ಯ</td><td>219</td><td>58,33,211.00</td></tr>
<tr><td>3</td><td>ಕಡಬ</td><td>101</td><td>17,50,240.00</td></tr>
<tr><td>4</td><td>ಪುತ್ತೂರು</td><td>24</td><td>3,54,880.00</td></tr>
</table>

</td></tr>
<tr><td>ಈ)</td><td>ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿಯನ್ನು ಪರಿಣಾಮಕಾರಿಯಾಗಿ ತಡೆಯಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು? (ವಿವರ ನೀಡುವುದು)</td><td>

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಕಾಡಾನೆಗಳ ಹಾವಳಿ ಹೆಚ್ಚಾಗಿರುವ ಪ್ರದೇಶದಲ್ಲಿ ಜನ ಸಂಪರ್ಕ ಸಭೆಯನ್ನು ಕರೆದು ಜನರಲ್ಲಿ ಅರಿವು ಮೂಡಿಸಿ, ವನ್ಯಪ್ರಾಣಿಗಳ ಬಗ್ಗೆ ಜಾಗೃತಿ ಹಾಗೂ ಸಹಬಾಳ್ವೆ ಮೂಡಿಸುವ ಸಭೆ / ಕಾರ್ಯಾಗಾರಗಳನ್ನು ಏರ್ಪಡಿಸಲಾಗುತ್ತಿದೆ.
2. ಬೆಳೆ ಹಾನಿ ಪ್ರಕರಣಗಳಲ್ಲಿ ಕೂಡಲೇ ಸರ್ಕಾರದ ಆದೇಶದ ಪ್ರಕಾರ ಪರಿಹಾರವನ್ನು ನೇರವಾಗಿ ಸಂಬಂಧಪಟ್ಟವರ ಬ್ಯಾಂಕ್ ಖಾತೆಗೆ ಪಾವತಿಸಲಾಗುತ್ತಿದೆ.

</td></tr>
</table>

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | 3. ರೈತರಿಗೆ ಸಬ್ಸಿಡಿ ದರದಲ್ಲಿ ಸೋಲಾರ್ ಬೇಲಿ ನಿರ್ಮಾಣ ಮಾಡಲು ಉತ್ತೇಜನ ನೀಡಲಾಗುತ್ತಿದೆ ಹಾಗೂ ಅರಣ್ಯದ ಅಂಚಿನಲ್ಲಿರುವ ಖಾಸಗಿ ಜಮೀನುಗಳ ಸುತ್ತಲು ಸರ್ಕಾರದ ವತಿಯಿಂದ ದೊರಕುವ ಶೇ. 50ರಷ್ಟು ಸಬ್ಸಿಡಿಯನ್ನು ಬಳಸಿಕೊಂಡು ಸೌರಶಕ್ತಿ ಬೇಲಿಯನ್ನು ನಿರ್ಮಿಸಲಾಗುತ್ತಿದೆ.<br>4. ಅರಣ್ಯ ರಕ್ಷಣೆ ಕ್ಯಾಂಪಿನ ಸಿಬ್ಬಂದಿಗಳನ್ನು ಆನೆ ಹಾವಳಿ ಸಮಯದಲ್ಲಿ ನಿಯಂತ್ರಣ ಕಾರ್ಯಗಳಿಗೆ ತೊಡಗಿಸಿಕೊಳ್ಳಲಾಗುತ್ತಿದೆ.<br>5. ಆನೆ ನಿರೋಧಕ ಕಂದಕ ನಿರ್ಮಾಣ, ಹಳ್ಳ ತೊರೆಗಳು ಬರುವಲ್ಲಿ ವಿಶೇಷ ವಿನ್ಯಾಸದ ಕಾಂಕ್ರಿಟ್ ರಚನೆ ಮತ್ತು ಸೋಲಾರ್ ಟೆಂಟಿಕಲ್ ಬೇಲಿಯನ್ನು ಮಾಡಲಾಗಿರುತ್ತದೆ.<br>6. ಬೇರೆ ವಿಭಾಗಗಳಲ್ಲಿನ ಎಲಿಫೆಂಟ್ ಟ್ರಾಕರ್ಸ್‌ಗಳು, ನುರಿತ ಆನೆ ಕಾವಾಡಿಗರು ಹಾಗೂ ವೈದ್ಯರ ಸಹಯೋಗವನ್ನು ಪಡೆದು ಊರಿಗೆ ಬಂದ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸಿರುವ ಹಾಗೂ ಸೆರೆಹಿಡಿಯುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>7. ಕಾಡಾನೆ ಸಂಚರಿಸುವ ಸ್ಥಳಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸಲಾಗುತ್ತಿದೆ.<br>8. ರಾತ್ರಿ ಗಸ್ತು ತಂಡವನ್ನು ರಚಿಸಿಕೊಂಡು ನಿರಂತರವಾಗಿ ಗಸ್ತು ಸಂಚರಿಸಿ ಕಾಡಾನೆ ಹಾವಳಿಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>9. ಕಾಡಾನೆ ಹಾವಳಿ ಇರುವ ಗ್ರಾಮಗಳಲ್ಲಿ ಸ್ಥಳೀಯ ಗ್ರಾಮಸ್ಥರು, ಇಲಾಖಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮೊಬೈಲ್ ಸಂದೇಶ-ಗ್ರೂಪ್‌ಅನ್ನು ರಚಿಸಿ, ಕಾಡಾನೆ ಹಾವಳಿ ಬಗ್ಗೆ ಸಂದೇಶಗಳನ್ನು ಸ್ಥಳೀಯರಿಗೆ ರವಾನಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>10. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ವಿಭಾಗೀಯ ಕಮಾಂಡ್ ಕೇಂದ್ರವನ್ನು ತೆರೆದಿದ್ದು, ಸದರಿ ಕೇಂದ್ರದಲ್ಲಿ ಆನೆಯ ಚಲನ ವಲನವನ್ನು ಪರಿಶೀಲಿಸಲಾಗುತ್ತಿದ್ದು, ಸದರಿ ಕೇಂದ್ರಕ್ಕೆ ಸಾರ್ವಜನಿಕರು ಆನೆ ಇರುವಿಕೆ ಬಗ್ಗೆ ದೂರನ್ನು ನೀಡಬಹುದಾಗಿದ್ದು, ಸದರಿ ದೂರನ್ನು ಮುಕ್ತಾಯಗೊಳಿಸುವವರೆಗೆ ಕೇಂದ್ರದಲ್ಲಿ ಪರಿಶೀಲಿಸಲಾಗುತ್ತಿದೆ.<br><br>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಸರ್ಕಾರದ ಆದೇಶ ಸಂಖ್ಯೆ:FEE 235 FWL 2025 ದಿನಾಂಕ:02.03.2026 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ವಿಭಾಗಕ್ಕೆ ಆನೆ ಕಾರ್ಯಪಡೆಯನ್ನು (Elephant Task Force) ರಚಿಸಿ ಆದೇಶಿಸಿದೆ. |

**ಇ-ಸಂಖ್ಯೆ: ಅಪಜೀ 68 ಎಫ್‌ಡಬ್ಲ್ಯೂಎಲ್ 2026**

(ಈಶ್ವರ ಬಿ. ಖಂಡ್ರೆ)
ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು